# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 953
ಉತ್ತರಿಸಬೇಕಾದ ದಿನಾಂಕ : 13.12.2023
ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೇಂದ್ರ ಸರ್ಕಾರವು ಜಾನುವಾರುಗಳ ನಿಖರ ಮಾಹಿತಿಗಾಗಿ ರೂಪಿಸಿರುವ ಇನಾಫ್ ಯೋಜನೆ (ಜಾನುವಾರುಗಳಿಗೆ ಗುರುತಿನ ಕಿವಿಯೋಲೆ ಅಳವಡಿಸುವ ಕಾರ್ಯಕ್ರಮ) ಹತ್ತಾರು ಕಾರಣಗಳಿಂದ ಹಿನ್ನಡೆ ಅನುಭವಿಸುತ್ತಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಳ್ಳಲಾಗುವ ಕಾಲು ಬಾಯಿ ರೋಗ, ಕಂದು ರೋಗ, ಪಿಪಿಆರ್ ಮತ್ತು ಹಂದಿ ಜ್ವರ ನಿಯಂತ್ರಣ ಲಸಿಕಾ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಲಸಿಕೆಗೆ ಒಳಪಡಿಸುವ ಎಲ್ಲಾ ಜಾನುವಾರುಗಳನ್ನು ಗುರುತಿಸಲು ಕಡ್ಡಾಯವಾಗಿ 12 ಸಂಖ್ಯೆಯ ಕಿವಿಯೋಲೆ ಅಳವಡಿಸಿ, ಮಾಹಿತಿಯನ್ನು Information Network for Animal Productivity and Health (INAPH) ತಂತ್ರಾಂಶದಲ್ಲಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ.<br><br>ಇನಾಫ್ ತಂತ್ರಾಂಶವನ್ನು National Dairy Development Board (NDDB) ವತಿಯಿಂದ ನಿರ್ವಹಿಸಲಾಗುತ್ತಿದ್ದು, ನವೆಂಬರ್-2023 ರ ಮಾಹೆಯಿಂದ ಭಾರತ ಸರ್ಕಾರದಿಂದ ಲೋಕಾರ್ಪಣೆಗೊಂಡ ಪಶುಧನ್ ಆಪ್ ತಂತ್ರಾಂಶವನ್ನು ಇನಾಫ್ ತಂತ್ರಾಂಶದ ಪರ್ಯಾಯ ಯೋಜನೆಯಾಗಿ ಮಾರ್ಪಡಿಸಲಾಗಿದೆ. ಈ ಕಾರಣದಿಂದ ಇನಾಫ್ ತಂತ್ರಾಂಶದಲ್ಲಿ ದಾಖಲಿಸಲಾದ ಜಾನುವಾರು ವಿವರಗಳು ಭಾರತ್ ಪಶುಧನ್ ಆಪ್‌ನ ಡ್ಯಾಶ್ ಬೋರ್ಡ್‌ನಲ್ಲಿ ಪ್ರತಿಬಿಂಬಿಸುವುದು ತಡವಾಗುತ್ತಿದೆ. ಇದರ ಬಗ್ಗೆ NDDB ಅಧಿಕಾರಿಗಳನ್ನು ಸಂಪರ್ಕಿಸಿ ನ್ಯೂನತೆಯನ್ನು ಸರಿಪಡಿಸಲು ಕೋರಲಾಗಿದೆ.<br><br>2019-20 ನೇ ಸಾಲಿನಿಂದ ಕಾಲು ಬಾಯಿ ರೋಗ ಲಸಿಕಾ ಕಾರ್ಯಕ್ರಮ ಮತ್ತು ಕಂದು ರೋಗ ಲಸಿಕಾ ಕಾರ್ಯಕ್ರಮದ ಅಡಿಯಲ್ಲಿ ಅಕ್ಟೋಬರ್-2023 ಮಾಹೆಯ ಅಂತ್ಯದವರೆಗೆ **11669304** ಜಾನುವಾರುಗಳಿಗೆ (ದನ ಮತ್ತು ಎಮ್ಮೆಗಳಿಗೆ) ಕಿವಿಯೋಲೆ ಅಳವಡಿಸಿ ಮಾಹಿತಿಯನ್ನು ಇನಾಫ್ ತಂತ್ರಾಂಶದಲ್ಲಿ ದಾಖಲಿಸಲಾಗಿದೆ. |

| | | |
|---|---|---|
| ಆ | ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಗ್ರಾಮೀಣ ಭಾಗದ ರೈತರಿಗೆ ತಪ್ಪು ತಿಳುವಳಿಕೆ ಇದ್ದು, ಅದರಲ್ಲೂ ಬಹುತೇಕ ಪ್ರದರ್ಶನಕ್ಕಾಗಿ ಸಾಕುವ ಹೋರಿಗಳಿಗೆ ಕಿವಿಯೋಲೆ ಹಾಕಲು ಹಿಂದೇಟು ಹಾಕುತ್ತಿದ್ದು, ಈ ನಿಟ್ಟಿನಲ್ಲಿ ರೈತಾಪಿ ಜನರಿಗೆ ಸೂಕ್ತ ಮಾರ್ಗದರ್ಶನ ತಿಳುವಳಿಕೆ ನೀಡಿ ಕಾರ್ಯರೂಪಕ್ಕೆ ತರಲು ಸರ್ಕಾರವು ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿರುವ ಎಲ್ಲಾ ದನ, ಎಮ್ಮೆ, ಕರು, ಮೇಕೆ ಮತ್ತು ಹಂದಿಗಳಿಗೆ ಕಡ್ಡಾಯವಾಗಿ ಕಿವಿಯೋಲೆಗಳನ್ನು ಅಳವಡಿಸಿ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ. ಇದು ರೈತರಿಗೆ ಹಾಲು ಪ್ರೋತ್ಸಾಹಧನ ವಿತರಿಸಲು ಮತ್ತು ಜಾನುವಾರುಗಳು ಮರಣ ಹೊಂದಿದ ಸಂಧರ್ಭದಲ್ಲಿ ಪರಿಹಾರಧನ ಒದಗಿಸಲು ಕಡ್ಡಾಯವಾಗಿರುತ್ತದೆಂದು ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 62 ಪಪಾಯೋ 2020, ದಿನಾಂಕ:15-05-2020 ರಂದು ಆದೇಶ ಹೊರಡಿಸಲಾಗಿರುತ್ತದೆ (ಆದೇಶದ ಪ್ರತಿ ಲಗತ್ತಿಸಿದೆ).<br><br>ಜಾನುವಾರುಗಳಿಗೆ ಕಿವಿಯೋಲೆ ಹಾಕಿ ಮಾಹಿತಿಯನ್ನು ಇನಾಫ್ ತಂತ್ರಾಂಶದಲ್ಲಿ ದಾಖಲಿಸಲು ಲಸಿಕಾದಾರರಿಗೆ ಕೇಂದ್ರ ಸರ್ಕಾರವು ನಿಗಧಿಪಡಿಸಿದ ರೀತಿಯಲ್ಲಿ ಪ್ರೋತ್ಸಾಹಧನವನ್ನು ಸಹ ನೀಡಲಾಗುತ್ತಿದೆ.<br><br>ಪ್ರದರ್ಶನಕ್ಕಾಗಿ ಸಾಕುವ ಹೋರಿಗಳಿಗೆ ಕಿವಿಯೋಲೆ ಅಳವಡಿಸಿದಲ್ಲಿ ಮಾತ್ರ ಪ್ರದರ್ಶನದಲ್ಲಿ ಭಾಗವಹಿಸಬಹುದೆಂದು ಸೂಚಿಸಲು ನಿರ್ಧರಿಸಲಾಗಿದೆ.<br><br>ಈ ನಿಟ್ಟಿನಲ್ಲಿ ಇಲಾಖೆಯ ಸ್ಥಳೀಯ ಪಶುವೈದ್ಯಕೀಯ ಸಂಸ್ಥೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಮತ್ತು ಕೆಎಂಎಫ್ ವತಿಯಿಂದ ಲಸಿಕಾ ಕಾರ್ಯಕ್ರಮಗಳ ಅಭಿಯಾನದ ವೇಳೆ ಪಶುವೈದ್ಯಕೀಯ ಸಂಸ್ಥೆಗಳ ವ್ಯಾಪ್ತಿಗೆ ಬರುವ ಗ್ರಾಮಗಳ ರೈತರಿಗೆ ಅರಿವು ಮೂಡಿಸಲಾಗಿದೆ. |

**ಇ-ಪಸಂಮೀ 245 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ (NADCP- National Animal-Disease Control Programme) ಕಾಲು ಬಾಯಿ ರೋಗ ಮತ್ತು ಬ್ರುಸೆಲ್ಲಾ ರೋಗ ಲಸಿಕೆಗೆ ಒಳಪಡಿಸುವ ಜಾನುವಾರುಗಳಿಗೆ ಕಡ್ಡಾಯವಾಗಿ (UID- Ear Tags) ಕಿವಿ ಓಲೆ ಹಾಕುವ ಬಗ್ಗೆ.

**ಓದಲಾಗಿದೆ:-** 1) ದಿನಾಂಕ: 20.11.2019ರಂದು National Steering Committee. DADF. ಭಾರತ ಸರ್ಕಾರದ ನಡವಳಿಗಳು.

2) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: K-11053/13/2020-LH ದಿನಾಂಕ: 03.03.2020.

**ಪ್ರಸ್ತಾವನೆ:**

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮ (NADCP) ಅಡಿಯಲ್ಲಿ ಜಾನುವಾರುಗಳಿಗೆ ಕಾಲುಬಾಯಿ ರೋಗ ಲಸಿಕೆ ಹಾಗೂ ಬ್ರೂಸೆಲ್ಲಾ ಲಸಿಕೆ ಹಾಕುವ ಕಾರ್ಯಕ್ರಮವನ್ನು ಶೇಕಡ 100 ರಷ್ಟು ಕೇಂದ್ರ ಸರ್ಕಾರದ ಅನುದಾನದಲ್ಲಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಲಸಿಕೆಗೆ ಒಳಪಡಿಸುವ ಜಾನುವಾರುಗಳನ್ನು ಗುರುತಿಸಲು ಕಡ್ಡಾಯವಾಗಿ 12 ಸಂಖ್ಯೆಯ (UID-Ear Tags) ಕಿವಿ ಓಲೆಯನ್ನು ಅಳವಡಿಸಿ INAPH (Information Network for Animal Production & Health) ತಂತ್ರಾಂಶದಲ್ಲಿ ಪೂರ್ಣ ಮಾಹಿತಿಯನ್ನು ದಾಖಲಿಸಬೇಕಾಗಿರುತ್ತದೆ. ಇದಕ್ಕಾಗಿ ಅವಶ್ಯಕತೆ ಇರುವ ಕಿವಿ ಓಲೆಗಳನ್ನು ಕೇಂದ್ರ ಸರ್ಕಾರ ಒದಗಿಸಲಿದ್ದು, ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮ (NADCP) ದಡಿಯಲ್ಲಿ ಪ್ರತಿಯೊಂದು ಜಾನುವಾರುವಿಗೆ Ear Tag ಅಳವಡಿಕೆ ಹಾಗೂ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ದಾಖಲಿಸಲು ರೂ.2.50 (ಎರಡು ರೂಪಾಯಿ ಐವತ್ತು ಪೈಸೆ) ಗಳ ಪ್ರೋತ್ಸಾಹ ಧನ ನೀಡಲು ಕೇಂದ್ರ ಸರ್ಕಾರದ ಮಟ್ಟದಲ್ಲಿ ತೀರ್ಮಾನಿಸಲಾಗಿರುತ್ತದೆ. ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಲಸಿಕೆಗೆ ಒಳಪಡುವ ಪ್ರತಿಯೊಂದು ಜಾನುವಾರು ಮತ್ತು ಜಾನುವಾರು ಮಾಲೀಕರ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ. ಅಲ್ಲದೆ ಜಾನುವಾರುಗಳು ಮಾರಾಟವಾದ ಸಂಧರ್ಭದಲ್ಲಿಯೂ ಸಹ ಮಾಹಿತಿಯನ್ನು ತಂತ್ರಾಂಶದಲ್ಲಿ ದಾಖಲಿಸುವುದರಿಂದ ಜಾನುವಾರುಗಳ ಸ್ಥಳದ ಮಾಹಿತಿ ಮತ್ತು ಆರೋಗ್ಯ, ತಳಿ ವರ್ಧನೆಗೆ ಸಂಬಂಧಪಟ್ಟ ಮಾಹಿತಿಯನ್ನು ತಿಳಿಯಬಹುದಾಗಿರುತ್ತದೆ. ಎಂದು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 20.11.2019 ರಂದು ನಡೆದ National Steering Committee, DADF, ಸಭಾ ನಡವಳಿಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 03.03.2020ರ ಕೇಂದ್ರ ಸರ್ಕಾರದ ಪತ್ರದಲ್ಲಿ ಜಾನುವಾರುಗಳಿಗೆ ಯಾವುದೇ ರೋಗೋದ್ರೇಕ ಉಂಟಾದಾಗ INAPH ತಂತ್ರಾಂಶದಿಂದ ಈಗಾಗಲೇ ಲಸಿಕೆ ಹಾಕಾಲಾಗಿರುವ ಮಾಹಿತಿಯನ್ನು ತಿಳಿಯಬಹುದಾಗಿದ್ದು, ರೋಗೋದ್ರೇಕ ನಿಯಂತ್ರಿಸುವುದರಲ್ಲಿ ಸಹಕಾರಿಯಾಗಿರುತ್ತದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ಶೇಕಡ 100 ರ ಅನುದಾನದಲ್ಲಿ ಕೇಂದ್ರ ಸರ್ಕಾರ ದಿಂದ ಹಮ್ಮಿಕೊಂಡಿರುವ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದ (NADCP) ಪ್ರಮುಖ ಪ್ರಕ್ರಿಯೆಯಾದ "ಜಾನುವಾರುಗಳ ಗುರುತಿಸುವಿಕೆ "ಕಾರ್ಯಕ್ರಮದಲ್ಲಿ ರಾಜ್ಯದಲ್ಲಿರುವ ಎಲ್ಲಾ ದನ, ಎಮ್ಮೆ, ಕುರಿ, ಮೇಕೆ ಮತ್ತು ಹಂದಿಗಳಿಗೆ ಕಡ್ಡಾಯವಾಗಿ ಕಿವಿಓಲೆಗಳನ್ನು ಅಳವಡಿಸಿ ಮಾಹಿತಿಯನ್ನು

ಅದರಂತೆ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಪಸಂಮೀ 62 ಪಪಾಯೋ 2020.
ಬೆಂಗಳೂರು, ದಿನಾಂಕ:15.05.2020.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ (NADCP) ಜಾನುವಾರುಗಳಿಗೆ 2020-21 ನೇ ಸಾಲಿನಿಂದ ಕಾಲು ಬಾಯಿ ರೋಗ ಲಸಿಕೆ ಹಾಗೂ ಬ್ರೂಸೆಲ್ಲಾ ಲಸಿಕೆ ಹಾಕುವ ಕಾರ್ಯಕ್ರಮವನ್ನು ಶೇಕಡ 100 ರಷ್ಟು ಕೇಂದ್ರ ಸರ್ಕಾರದ ಅನುದಾನದಲ್ಲಿ ಅನುಷ್ಠಾನಗೊಳಿಸಲು ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದ (NADCP) ಪ್ರಮುಖ ಪ್ರಕ್ರಿಯೆಯಾದ "ಜಾನುವಾರುಗಳ ಗುರುತಿಸುವಿಕೆ" ಕಾರ್ಯಕ್ರಮದಲ್ಲಿ ರಾಜ್ಯದಲ್ಲಿರುವ ಎಲ್ಲಾ ದನ, ಎಮ್ಮೆ, ಕುರಿ, ಮೇಕೆ ಮತ್ತು ಹಂದಿಗಳಿಗೆ ಕಡ್ಡಾಯವಾಗಿ ಕಿವಿಯೋಲೆಗಳನ್ನು ಅಳವಡಿಸಿ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ದಾಖಲಿಸುವಂತೆ ಸರ್ಕಾರವು ಆದೇಶಿಸಿದೆ.

ಮುಂದುವರೆದು, ಮುಂದಿನ ದಿನಗಳಲ್ಲಿ ಹಾಲು ಪ್ರೋತ್ಸಾಹ ಧನ ಒಳಗೊಂಡಂತೆ ಇತರ ಇಲಾಖಾ ಕಾರ್ಯಕ್ರಮಗಳ ಸೌಲಭ್ಯ ಪಡೆಯಲು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ "ಜಾನುವಾರುಗಳ ಗುರುತಿಸುವಿಕೆ" ಕ್ರಿಯೆ ಮಾನದಂಡವಾಗಿ ಪರಿಗಣಿಸಿ, ಜಿಲ್ಲಾ ವ್ಯಾಪ್ತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪಶು ವೈದ್ಯರು ಮತ್ತು ಅರೆ ತಾಂತ್ರಿಕ ಸಿಬ್ಬಂದಿಗಳು ಮತ್ತು ಕರ್ನಾಟಕ ಹಾಲು ಮಹಾಮಂಡಳಿಯ ಅಧೀನದಲ್ಲಿ ಬರುವ ರಾಜ್ಯದ ಎಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶು ವೈದ್ಯರು ಮತ್ತು ಅರೆ ತಾಂತ್ರಿಕ ಸಿಬ್ಬಂದಿಗಳು ಜಾನುವಾರುಗಳನ್ನು ಗುರುತಿಸಲು ಕಡ್ಡಾಯವಾಗಿ 12 ಸಂಖ್ಯೆಯ (Ear Tags) ಕಿವಿ ಓಲೆಯನ್ನು ಅಳವಡಿಸಿ INAPH ತಂತ್ರಾಂಶದಲ್ಲಿ ಪೂರ್ಣ ಮಾಹಿತಿಯನ್ನು ದಾಖಲಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಗರಿಷ್ಠ ಪ್ರಗತಿ ಸಾಧಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/05/2020
(ಟಿ.ಹನುಮಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ, ಕಹಾಮ ಸಂಕೀರ್ಣ, ಎಂ.ಎಚ್ ಮರೀಗೌಡ ರಸ್ತೆ, ಬೆಂಗಳೂರು - 560029
4. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು.
6. ಸಂಬಂಧಪಟ್ಟ ರಾಜ್ಯ ಮತ್ತು ಜಿಲ್ಲಾ ಮಟ್ಟದ ಇಲಾಖಾ ಅಧಿಕಾರಿಗಳು (ಆಯುಕ್ತರ ಮುಖಾಂತರ).
7. ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ

File No. K-10853/23/2020-LH

Dated: 03.03.2020

**Subject: FMD vaccination only after ear-tagging of animals under NADCP**

Hon'ble Prime Minister launched the National Animal Disease Control Programme for Foot and Mouth Disease (FMD) and Brucellosis (NADCP) on 11 September 2019. Accordingly, States have started vaccination during the month of January-February, 2020.

As per the guidelines, identification of animals by ear tagging and registration on INAPH is very essential and pre-requisite for recording of vaccination data on INAPH. This Department has already issued instructions in this regard & further, it is also reiterated that remuneration to vaccinators is to be given only after ensuring recording of vaccination data on INAPH portal and certified by the in-charge officer concerned.

You are requested to direct the officers concerned to ensure that no FMD vaccination is undertaken without tagging and registration of tagged animals on INAPH. In case, the state is facing any issues in registering animals on INAPH, it is requested to apprise Department immediately. The functionalities of the IT Android mobile device and the INAPH portal must be active before starting vaccination on field. There should be no delay and discrepancy between the on-field activity and the online data entry and reporting on INAPH, if required by hiring adequate staff / data entry operators.

It is also requested to provide daily district wise consolidated vaccination and tagging reports in the formats shared by PMA on email dated 28 February 2020 in editable excel format over email to the ID mdnadcp-ahd@gov.in, PMAtoNADCP@in.ey.com and in WhatsApp group named "NADCP DAHD".

Yours sincerely,

(Mihir Kumar Singh)

Principal Secretaries/ Secretaries/ Administrators,
Department of Animal Husbandry,
All States/ UTs

CC:

1. Director/ Commissioner- Animal Husbandry Department, all States/ UTs
2. Chief Executive Officer, Livestock Development Boards, all States/ UTs

... 23388078 Email: jsdairy-ahd@nic.in